ದಿನಾಂಕಃ 09.02.2024 ರಂದು ಸಾಕ್ಷಿಗೆ ಪ್ರಮಾಣವಚನ ಮಾಡಿಸಲಾಯಿತು.

ಮುಖ್ಯ ವಿಚಾರಣೆ : ಅರ್ಜಿದಾರರ ಪರ : ಶ್ರೀ ಜಿ.ಎಸ್.ಎನ್. ವಕೀಲರಿಂದಃ

ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿರುವ ಎಲ್ಲಾ ಸಂಗತಿಗಳು ನನ್ನ ಸ್ವಂತ ಮಾಹಿತಿ ಮೇರೆಗೆ ಹೇಳಿ ಬರೆಸಿದ್ದು ಅವು ಸತ್ಯವಾಗಿರುತ್ತವೆ. ಪ್ರಮಾಣಪತ್ರದಲ್ಲಿನ ಸಂಗತಿಗಳನ್ನು ತಿಳಿದುಕೊಂಡು ಸಹಿ ಮಾಡಿರುತ್ತೇನೆ. ನನ್ನ ಸಾಕ್ಷಿಗೆ ಬೆಂಬಲಿತವಾಗಿ ಪ್ರಥಮ ವರ್ತಮಾನ ದೃಢೀಕೃತ ನಕಲು ಪ್ರತಿಯನ್ನು ನಿಪಿಃ1 ಎಂದು, ದೂರಿನ ದೃಢೀಕೃತ ನಕಲನ್ನು ನಿಪಿಃ2 ಎಂದು, ಸ್ಥಳ ಪಂಚನಾಮೆಯ ದೃಢೀಕೃತ ನಕಲನ್ನು ನಿಪಿಃ 3 ಎಂದು, ಕಚ್ಚಾ ನಾಕಶೆಯ ದೃಡೀಕೃತ ನಕಲನ್ನು ನಿಪಿ4 ಎಂದು, ಮೋಟಾರ್ ವಾಹನ ಅಪಘಾತ ವರದಿಯನ್ನು ನಿಪಿಃ5 ಎಂದು, ಗಾಯದ ಪ್ರಮಾಣ ಪತ್ರದ ದೃಢೀಕೃತ ನಕಲನ್ನು ನಿಪಿ. 6 ಎಂದು, ಚಾರ್ಜ್ ಶೀಟ್ ನ ದೃಢೀಕೃತ ನಕಲನ್ನು ನಿಪಿಃ7 ಎಂದು, ಸಿಟಿ ಸ್ಕ್ಯಾನ್ ರಿಪೋರ್ಟನ್ನು ನಿಪಿ 8 ಎಂದು, ಡಿಸ್ಚಾರ್ಜ್ ಸಮ್ಮರಿಯ ದೃಢೀಕೃತ ನಕಲನ್ನು ನಿಪಿ 9 ಎಂದು, 23 ವೈದ್ಯರ ಸಲಹಾ ಚೀಟಿಯನ್ನು ಒಟ್ಟಿಗೆ ನಿಪಿ10 ಎಂದು, 63 ಮೆಡಿಕಲ್ ಬಿಲ್ ಗಳನ್ನು ಒಟ್ಟಿಗೆ ನಿಪಿಃ 11 ಎಂದು ಗುರುತಿಸಲಾಗಿದೆ.

**2 ನೇ ಎದುರುದಾರರ ಪರ ವಕೀಲರು ಗೈರು ಹಾಜರಾಗಿದ್ದು ಪಾಟೀ ಸವಾಲಿಗೆ ಸಮಯ ನೀಡಿ ಮುಂದೂಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೇ ಸ ಇ ಒ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಶ್ರೀರಂಗಪಟ್ಟಣ.